Sri S. NIJALINGAPPA —Let my friend ask another question ; my remembrance is round about 20,000 a year and it may be a lakh of wells during the IV Plan.

ಶ್ರೀ ಬಿ. ಭಾಸ್ಕರಶೆಟ್ಟಿ.—ಇಷ್ಟರತನಕ ಈ ಭೂ ಅಭಿವೃದ್ಧಿ ಬ್ಯಾಂಕಿನವರು ಎಷ್ಟು ಬಾವಿಗಳಿಗೆ ಹಣ ಕೊಟ್ಟಿದ್ದಾರೆ ? ಒಟ್ಟು ಮೊತ್ತ ಎಷ್ಟಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಬೇರೆ ಪ್ರಶ್ನೆ ಕೇಳಬೇಕಾಗುತ್ತದೆ, ಅದು ಈ ಪ್ರಶ್ನೆಗೆ ಸಂಬಂಧಿಸಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಲ್ಯಾಂಡ್ ಡೆವಲಪ್‌ಮೆಂಟ್ ಸೊಸೈಟಿ ಮೂಲಕ ಹಣ ಕೊಡುತ್ತಾ ಇದ್ದೀರಿ. ತಾಲ್ಲೂಕು ಮಟ್ಟದಲ್ಲಿ ಪಕ್ಷಗಳು, ಪಂಗಡಗಳವರು ಗುಂಪು ಸೇರಿ ಒಂದೇ ಪಂಗಡದವರಾಗುತ್ತಾರೆ. ನಮ್ಮ ತಾಲ್ಲೂಕಿನ ಸೊಸೈಟಿಯಲ್ಲಿ ಇನ್ನೂ ಕೂಡ ಜನರಲ್ ಬಾಡಿ ಆಗಿಲ್ಲ. ಹೀಗಾಗಿ ಒಂದು ಪಕ್ಷದವರಿಗೇ ಹಣ ಸಿಕ್ಕುತ್ತಾ ಇದೆ. ಡಿಪಾರ್ಟ್‌ಮೆಂಟಿನವರಾದರೆ ಎಲ್ಲಿ ಅಗತ್ಯ ಇದೆ ಅಂತಹವರಿಗೆ ಕೊಡುತ್ತಾ ಇದ್ದರು. ಆದ್ದರಿಂದ ದಯವಿಟ್ಟು ಸಂಸ್ಥೆಗಳಿಗೆ ಈ ಅಧಿಕಾರವನ್ನು ಕೊಡದೇ ಅಧಿಕಾರಿಗಳ ಹತ್ತಿರ ಅಥವ ತಾಲ್ಲೂಕು ಬೋರ್ಡಿಗೆ ಈ ಅಧಿಕಾರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರ ಇವತ್ತೇ ತಿಳಿದದ್ದು, ಇಂತಹ ಪುಕಾರು ಇದುವರೆಗೂ ಬಂದಿರಲಿಲ್ಲ, ವಿಚಾರ ಮಾಡಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಕೆಲವು ಕಡೆ ಡೀಪ್ ಬೋರ್ ವೆಲ್ಸ್ ಹಾಕಬೇಕಾದರೆ 11 ಸಾವಿರ ರೂಪಾಯಿಗಳವರೆಗೂ ಬೇಕಾಗುತ್ತದೆ, ತಾವು ಕೊಡುವುದು 4 ಅಥವಾ 5 ಸಾವಿರ ರೂಪಾಯಿ, ಆದ್ದರಿಂದ ಇದನ್ನು ಹೆಚ್ಚು ಮಾಡುವುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಒಂದು ರೀತಿಯಾಗಿ ಆಗಲೇ ಉತ್ತರ ಕೊಟ್ಟಿದ್ದೇನೆ. ಒಬ್ಬ ರೈತನಿಂದ ತೆಗೆಯುತಕ್ಕ ಕೆಲಸ ಬಹಳ ಕಷ್ಟವಾಗುತ್ತದೆ. ಎಲ್ಲಾದರೂ ಅಂತಹ ನಿರ್ದಿಷ್ಟವಾದ ಕೇಸು ಬಂದರೆ ಯೋಚನೆ ಮಾಡಬಹುದು.

Cement concreting the Petta Road of Holenarasipur

*Q.—86. Sri H. D. DEVE GOWDA (Holenarasipur).—

Will the Minister for Municipal Administration be pleased to state :—

(*a*) the amount of Loan or Grant sanctioned for cement concreting the Petta Road of Holenarasipur Town ;

(*b*) when the same was sanctioned ;

(*c*) whether the amount was utilised for the purpose to which it was sanctioned ;

(*d*) if not, the action taken by the Government for misapplication of funds by the Municipality ;

(*e*) whether Government would take necessary steps to complete the cement concreting or at least asphalting the Petta Road ?

A.—Sri R. M. PATIL (Minister for Municipal Administration).—

(*a*) A sum of Rs. 16,700 has been sanctioned as grant for Town Improvement Work.

(*b*) 27th March 1962.

(SRI R. M. PATIL)

(*c*) Only a portion of amount, *viz.*, Rs. 6,567-60 has been utilised.

(*d*) Does not arise in view of reply to clause (*c*).

(*e*) Action will be taken during the current year.

ಶ್ರೀ ಎಚ್.ಡಿ. ದೇವೇಗೌಡ.—ನಾನು ಪೆಟ್ಟಿ ರಸ್ತೆಗೆ ಸಿಮೆಂಟ್ ಕಾನ್‌ಕ್ರೀಟ್ ಮಾಡಿಸಲು ಮಂಜೂರಾದ ಮೊಬಲಗೆಷ್ಟು ಎಂದು ಕೇಳಿದ್ದರೆ ಟೌನಿನ ಅಭಿವೃದ್ಧಿಗಾಗಿ 16,700 ರೂಪಾಯಿಗಳನ್ನು ಖರ್ಚುಮಾಡಲಾಗಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಈ ಹಣವನ್ನು ಯಾವ ಯಾವ ಬಾಬು ಗಳಿಗೆ ಖರ್ಚುಮಾಡಲಾಯಿತು.

Sri R. M. PATIL.—This is for repairs of the road, metalling and all that.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಉದ್ದೇಶಕ್ಕಾಗಿ ಹಣವನ್ನು ಮಂಜೂರು ಮಾಡಲಾ ಯಿತೋ ಆ ಬಾಬಿಗೆ ಆ ಹಣವನ್ನು ಖರ್ಚುಮಾಡದೆ ಬೇರೆ ಬಾಬಿಗೆ ಏಕೆ ಹಣವನ್ನು ಖರ್ಚು ಮಾಡಲಾಯಿತು ಎಂದು ಪುರಸಭೆಯವರನ್ನು ಕೇಳಲಾಗುತ್ತದೆಯೆ ?

ಶ್ರೀ ಆರ್.ಎಂ. ಪಾಟೀಲ್.—ತಾವು ಕೇಳಿತಕ್ಕ ಉಪಪ್ರಶ್ನೆಗೆ ಸರಿಯಾದ ಉತ್ತರ (ಇ) ನಲ್ಲಿ ಕೊಡ ಲಾಗಿದೆ.

Aid to Development Works

*Q.—110. Sri N. CHIKKE GOWDA (Hoskote).—

Will the Minister for Municipal Administration be pleased to state :—

(*a*) the Development works for which the aid was given for the last 5 years to the Hoskote Municipality together with the amount of aid and whether this aid has been used properly ;

(*b*) whether they have received complaint regarding mismanagement of Hoskote Municipality ?

*A.—Sri R. M. PATIL (Minister for Municipal Administration).—

(*a*)

Year		*Amount* Rs. P.
1961-62	...	9,625-00
1962-63	...	8,955-00
1963-64	...	10,000-00
1964-65	...	8,000-00
1965-66	...	8,000-00

The grants were sanctioned for the Town Improvement Works, such as formation of roads, construction of drains, providing urinal and latrines, construction of culverts, etc. The entire grants were utilised for the said purposes. All the works were fully executed and completed satisfactorily.

(*b*) No.